ಕಾನೂನು ಬಾಹಿರವಾಗಿ ತಯಾರಿಸಿದ ಮದ್ಯ ಹಾಗೂ ಜಪ್ತಿ ಕುರಿತು.

672(344) ಶ್ರೀ ಸೈಯದ್ ಜುಲೇಪೀಕರ್(ಬೀದರ್) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನ ಸಿಂಧನಕೇರಿ ಹಳ್ಳಿಯಲ್ಲಿ ಅನಧಿಕೃತವಾಗಿ ತಯಾರಿಸಿದ 35,000 ಲೀಟರ್ ಸಾರಾಯಿಯನ್ನು ಅಬಕಾರಿ ಇಲಾಖೆಯು ವಶಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ಅನಧಿಕೃತ ಉತ್ಪಾದಕರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಜಯವಂತ ಸುಬ್ರಾಯ (ಅಬಕಾರಿ ರಾಜ್ಯ ಸಚಿವರು) :

1) 700 ಲೀಟರ್ ಸಾರಾಯಿಯನ್ನು ಮಾತ್ರ ವಶಪಡಿಸಿಕೊಂಡಿದೆ. ಹಾಗೂ ವಾಹನ ಸ್ಯಾಚೆಟ್ ಮಿಷನ್ ಮತ್ತು ಇನ್ನಿತರ ಅಬಕಾರಿ ವಸ್ತುಗಳನ್ನು ಜಪ್ತು ಮಾಡಲಾಗಿದೆ .

2) ಅನಧಿಕೃತವಾಗಿ ಸಾರಾಯಿ ತಯಾರು ಮಾಡುತ್ತಿದ್ದವರ ವಿರುದ್ಧ ಅಬಕಾರಿ ಕಾನೂನು ಪ್ರಕಾರ ಮೊಕದ್ದಮೆ 4 ಜನ ಆರೋಪಿಗಳನ್ನು ಬಂಧಿಸಲಾಗಿದೆ. ಜಪ್ತಾದ ಮಾಲನ್ನು ಮುಟ್ಟುಗೋಲು ಹಾಕಲು ನೋಟೀಸ್ ಜಾರಿಯಾಗಿದೆ ಹಾಗೂ ಮೊಕದ್ದಮೆಯು ತನಿಖೆ ಪ್ರಗತಿಯಲ್ಲಿದೆ.

ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಹುದ್ದೆ.

673(218) ಶ್ರೀ ಕುಂಬ್ಳೆ ಸುಂದರ್ ರಾವ್(ಸುರತ್ಕಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಆಯ್ಕೆ ಪ್ರಾಧಿಕಾರವು ಸದರಿಹುದ್ದೆಗಳಿಗಾಗಿ ಆಯ್ಕೆ ನಡೆಸುತ್ತಿದೆಯೇ? ಹೌದಾದಲ್ಲಿ ಇದುವರೆಗೆ ಆಯ್ಕೆ ಮಾಡಲಾದ ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಹುದ್ದೆಗಳ ಸಂಖ್ಯೆ ಎಷ್ಟು?

ಆ) ನೇಮಕಾತಿಗಾಗಿ ನಿಗದಿಪಡಿಸಿದ ಮಾರ್ಗಸೂಚಿಗಳು ಯಾವುವು?

ಇ) ಆಯ್ಕೆಯಾದ ಅಭ್ಯರ್ಥಿಗಳನ್ನು ವಿವಿಧ ಇಲಾಖೆಗಳಿಗೆ ನೇಮಕಾತಿಯನ್ನು ಮಾಡುವಾಗ ಯಾವ ಯಾವ ನೀತಿ ನಿಯಮಗಳನ್ನು ಅನುಸರಿಸಲಾಗುತ್ತಿದೆ?

ಈ) ನೇಮಕಾತಿ ಪ್ರಕ್ರಿಯೆಯಲ್ಲಿ ಮತ್ತು ಇಲಾಖಾವಾರು ಹಂಚಿಕೆಯಲ್ಲಿ ಅವ್ಯವಹಾರಗಳು ನಡೆಯುತ್ತಿ ರುವುದರಿಂದ ಸರ್ಕಾರವು ಈ ನಿಟ್ಟಿನಲ್ಲಿ ಏನಾದರು ಕ್ರಮ ತೆಗೆದುಕೊಳ್ಳಲಿದೆಯೇ?

ಶ್ರೀ ಜೆ. ಹೆಚ್ .ಪಟೇಲ್ (ಮುಖ್ಯಮಂತ್ರಿಗಳು) :

ಅ)ಹೌದು, 1996-97ನೇ ಸಾಲಿನಲ್ಲಿ 350 ಶೀಘ್ರಲಿಪಿಗಾರರ ಹಾಗೂ 881 ಬೆರಳಚ್ಚುಗಾರರ ಹುದ್ದೆಗಳಿಗೆ ಆಯ್ಕೆ ಮಾಡಲಾಗಿದೆ.ಈಗ ಈ ಪ್ರಾಧಿಕಾರವು ದಿನಾಂಕ 10-9-98ರಂದು ಒಂದು ಪ್ರಕಟಣೆಯನ್ನು ಹೊರಡಿಸಿ, 187 ಶೀಘ್ರಲಿಪಿಗಾರರ ಮತ್ತು 1033 ಬೆರಳಚ್ಚುಗಾರರ ಹುದ್ದೆಗಳನ್ನು ಭರ್ತಿಮಾಡಲು ಆಯ್ಕೆ ಪ್ರಕ್ರಿಯೆಯನ್ನು ಪ್ರಾರಂಭಿಸಿದೆ.